
# ಬೇರೆ ದಾರಿಗಳಿಲ್ಲ


ವಾಗೀಶ ಹೆಗಡೆ

ಪ್ರೀತಿಯ ಮೈಖಾನೆಯಲಿ ಅಪರಿಚಿತರು ಇರುವುದಿಲ್ಲ
ಇದು ಎಲ್ಲರಿಗೂ ತೆರೆದಿದೆ ಇಲ್ಲಿ ಬೀಗಗಳು ಇರುವುದಿಲ್ಲ

ತುಟಿಯಿಂದ ತುಟಿಗೆ ಜಾರುವ ಮಧುಬಟ್ಟಲುಗಳಿರುವುದಿಲ್ಲ
ಅಮೃತ ಕುಡಿದು ವಿಷಕಾರುವ ಶರಾಬುಗಳು ಇರುವುದಿಲ್ಲ

ಪ್ರೀತಿ ಚೆಲ್ಲಿ ವೈರಾಗ್ಯ ಅಳಿಸುವ ಸಾಕಿಗಳು ಇರುವರಿಲ್ಲಿ
ವಿಶ್ವಾಸಗಳಿಗೆ ಬೆಲೆಕಟ್ಟುವ ವ್ಯಾಪಾರಿಗಳು ಇರುವುದಿಲ್ಲ

ಪೂರ್ತಿ ಮೈಖಾನೆಯನು ನೀ ಕುಡಿದರು ಚಿಂತೆಯಿಲ್ಲ ಅವಿವೇಕಿ
ಇಲ್ಲಿ ರಸೀದಿಗಳು ಹರಿಯುವ ರಿವಾಜುಗಳು ಇರುವುದಿಲ್ಲ

ದ್ವೇಷ ಕಾರುವ ಬೀಗದ ಕೈಗಳು ಕಳೆದು ಹೋಗಿವೆ ಇಲ್ಲಿ
ಇಲ್ಲಿ ಯಾರಿಂದಲೂ ಸೇಡಿನ ಬಂಧನಗಳು ಇರುವುದಿಲ್ಲ

ಎಲ್ಲವನೂ ಬಿಟ್ಟು ಬಾ ಒಮ್ಮೆ ಮಧುಶಾಲೆಗೆ ಇಲ್ಲಿ
ಮನುಷ್ಯರನು ವರ್ಗಿಸುವ ಜಾತಿಧರ್ಮಗಳು ಇರುವುದಿಲ್ಲ

ಮಾನವೀಯ ಹೂಗಳಿಂದ ಶೃಂಗಾರಗೊಂಡಿವೆ ಗೋಡೆಗಳಿಲ್ಲಿ
ಇವುಗಳನು ಉರುಳಿಸುವ ಜಗದಲಿ ಬಂದೂಕುಗಳು ಇರುವುದಿಲ್ಲ.

ಮಧುಬಟ್ಟಲು ಎತ್ತಿದ ಶರಾಬಿಯ ತಪ್ಪೇನಿದೆ ಸಾಕಿ ಇಲ್ಲಿ
ನಶೆ ಘರ್ಜಿಸುವ ದನಿಗೆ ಯಾರ ಶಿಕಾಯತ್ತುಗಳು ಇರುವುದಿಲ್ಲ

ಮುಳ್ಳಿನ ಹಾಸಿಗೆಗೆ ಅಂಟಿದ ಹೂಗಳಿವೆ ಇಲ್ಲಿ 'ಉಮರ್'
ಜಿಗಿದು ಬರಲು ಇಲ್ಲಿ ಬೇರೆ ದಾರಿಗಳು ಇರುವುದಿಲ್ಲ

**● ಉಮರ್ ದೇವರಮನಿ ಮಾನ್ವಿ**

★ ಮೈಖಾನ – ಮಧುಶಾಲೆ, ಶರಾಬಿ – ಮದ್ಯ ವ್ಯಸನಿ, ಶಿಕಾಯತ್ತು –ದೂರು, ಆರೋಪ